ಆ) ಅನ್ವಯಿಸುವುದಿಲ್ಲ.

ಇ) ಮುಂದಿನ ಸಾಲಿನ ವರ್ಷದಲ್ಲಿ ಲಭ್ಯವಾಗುವ ಅನುದಾನದಲ್ಲಿ ಆದ್ಯತೆ ಮೇಲೆ ಕಾಮಗಾರಿಯನ್ನು ತೆಗೆದುಕೊಳ್ಳಬಹುದಾಗಿದೆ.

ನಿರ್ಬಂಧಿತ ಪ್ರದೇಶದ ನಿಯಮ ಸಡಿಲಿಸುವುದು

482 (631) ಶ್ರೀ ಆನಂದ ಸಿಂಗ್ (ವಿಜಯನಗರ–ಬಳ್ಳಾರಿ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬ್ಬು ಬೆಳೆ ನಿಯಂತ್ರಣ ಕಾಯ್ದೆಯಲ್ಲಿ ಕಬ್ಬು ಬೆಳೆ ಪ್ರದೇಶವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿದ್ದು ಕಬ್ಬು ಬೆಳೆಯುವ ರೈತರು ಸ್ವತಃ ತಾವು ಬೆಳೆದ ಕಬ್ಬನ್ನು ಮುಕ್ತವಾಗಿ ಮಾರಾಟ ಮಾಡುವ ಹಕ್ಕಿನಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ;

ಆ) ಬಂದಿದ್ದಲ್ಲಿ ರೈತರ ಹಿತದೃಷ್ಟಿಯಿಂದ ಕಬ್ಬು ಬೆಳೆ ಪ್ರದೇಶವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸುವ ನಿಯಮವನ್ನು ಸಡಿಲಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಹೌದು, ಕೆಲವು ರೈತ ಸಂಘಟನೆಗಳಿಂದ ಈ ಬೇಡಿಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ನಿರ್ಬಂಧಿತ ಪ್ರದೇಶವೆಂದು ಘೋಷಿಸುವ ನಿಯಮವನ್ನು ಸಡಿಲಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಕರ್ನಾಟಕದಲ್ಲಿ, ಬೇರೆ ರಾಜ್ಯಗಳಲ್ಲಿ ಇರುವಂತೆ, ಪ್ರತಿ ಕಾರ್ಖಾನೆಗೂ ತನ್ನದೇ ಆದ ಮೀಸಲು ಕ್ಷೇತ್ರ ಇರುತ್ತದೆ. ರಾಜ್ಯವು ಕಬ್ಬು ಅಭಿವೃದ್ಧಿ, ಕಬ್ಬು ಸಾಗಾಣಿಕೆ, ಕಬ್ಬಿನ ಬೆಲೆ ಈ ಎಲ್ಲಾ ವಿಷಯವನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಕಬ್ಬು (ನಿಯಂತ್ರಣ) ಕಾಯ್ದೆ 1966 ಇದನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸ ಬೇಕಾಗಿದೆ. ಈ ಕಾಯಿದೆಯ ಕಲಂ 6(1) (ಎ) (ಬಿ) (ಸಿ) (ಡಿ) (ಇ) ಅಡಿಯಲ್ಲಿ ಕಬ್ಬನ್ನು ಕೊಳ್ಳುವ ಸಂಬಂಧವಾಗಿ ನಿಯಮ ರೂಪಿಸಿರುತ್ತದೆ. ಅದರಂತೆ ಪ್ರತಿಯೊಂದು ಸಕ್ಕರೆ ಕಾರ್ಖಾನೆಯು ಸಾಮರ್ಥ್ಯಕ್ಕೆ ತಕ್ಕಂತೆ

ಮೀಸಲು ಕ್ಷೇತ್ರದ ಒಳಗಡೆ ಕಬ್ಬು ಕೊಳ್ಳಬೇಕಿರುತ್ತದೆ. ಮೀಸಲು ಕ್ಷೇತ್ರದಲ್ಲಿ ಕಬ್ಬು ಬೆಳೆಗಾರರು ಅಥವಾ ಕಬ್ಬು ಬೆಳೆಗಾರರ ಸಂಘವು ಕಾರ್ಖಾನೆಗೆ ನೀಡುವ ಕಬ್ಬಿನ ಪ್ರಮಾಣವನ್ನು ನಿಗಧಿ ಮಾಡಿ ಸೂಕ್ತ ಒಪ್ಪಂದ ಮಾಡಿಕೊಂಡು ಅದನ್ನು ಕಡ್ಡಾಯವಾಗಿ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಬೇಕು. ಕಾರ್ಖಾನೆಯು ಮೀಸಲು ಕ್ಷೇತ್ರದ ವ್ಯಾಪ್ತಿಯಿಂದ ಹೊರಗೆ ಕಬ್ಬನ್ನು ಸಾಗಾಣಿಕೆ ಮಾಡಲು ನಿರ್ಬಂಧವಿರುತ್ತದೆ. ಈ ಬಗ್ಗೆ ದಿನಾಂಕ: 09–09–2009 ರಂದು ಕರ್ನಾಟಕ ಗೌರವ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ: 31532/2008 ರಲ್ಲಿ ಆದೇಶ ನೀಡಿದ್ದು, ಪ್ರತಿ ಕಾರ್ಖಾನೆಯು ತನ್ನ ಮೀಸಲು ಪ್ರದೇಶದ ಒಳಗಡೆಯಿಂದ ಮಾತ್ರ ಕಬ್ಬನ್ನು ಪಡೆಯ ಬೇಕೆಂದು ಸೂಚಿಸಿದೆ, ಹಾಗೂ ಕಬ್ಬನ್ನು ಹೊರಗೆ ಸಾಗಾಣಿಕೆ ಮಾಡಬೇಕಾದರೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಪರ್ಮಿಟ್ ಪಡೆದು ಸಾಗಾಣಿಕೆ ಮಾಡಬೇಕಾಗಿರುತ್ತದೆ. ಹಾಲಿ ಇರುವ ಕೇಂದ್ರ ಸರ್ಕಾರದ ಕಬ್ಬು (ನಿಯಂತ್ರಣ) ಕಾಯ್ದೆಯಂತೆ ಕಬ್ಬನ್ನು ಮುಕ್ತವಾಗಿ ಮಾರಾಟ ಮಾಡಲು ಅವಕಾಶವಿರುವುದಿಲ್ಲ. ಈ ವಿಷಯವನ್ನು ಎಲ್ಲಾ ಕಾರ್ಖಾನೆಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಗೌರವ ಉಚ್ಚ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಇ) ಕೇಂದ್ರ ಸರ್ಕಾರದ ಕಬ್ಬು (ನಿಯಂತ್ರಣ) ಕಾಯ್ದೆ 1966 ರನ್ವಯ ಇದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ.

ರಸ್ತೆ ನಿರ್ಮಾಣ

483 (102) ಶ್ರೀ ಸಿ. ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕು ಹೆಬ್ಬಾಲೆ ಸೂಳಿಕೋಟೆಯ ಒಳಸೇತುವೆ ನಿರ್ಮಾಣ ಆಗಿದ್ದು, ಈ ಸೇತುವೆಗೆ ಹೊಂದಿಕೊಂಡಂತೆ ರಸ್ತೆ ನಿರ್ಮಾಣ ಆಗದಿರಲು ಕಾರಣಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸೋಮವಾರಪೇಟೆ ಮತ್ತು ಪಿರಿಯಾಪಟ್ಟಣ ತಾಲ್ಲೂಕಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಹೆಬ್ಬಾಳೆ